# ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ-2026
## ಆಹಾರ ಮೇಳ ಉಪಸಮಿತಿ

---

- ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ-2026ರ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವು "ಜನಪ್ರಿಯ ಆಹಾರ ಮೇಳವನ್ನು" **ದಿನಾಂಕ:11-10-2026 ರಿಂದ 25-10-2026** ರವರೆಗೆ ಮೈಸೂರಿನ ಮಹಾರಾಜ ಮೈದಾನದಲ್ಲಿ ನಡೆಸಲು ಉದ್ದೇಶಿಸಲಾಗಿದೆ.
- ಆಹಾರಮೇಳದಲ್ಲಿ ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ, ಹೊರ ರಾಜ್ಯ ಆಹಾರ ಪದ್ಧತಿಯಲ್ಲಿ ಕಾಶ್ಮೀರಿ, ಪಂಜಾಬಿ, ರಾಜಸ್ಥಾನಿ, ಈಶಾನ್ಯ ಭಾರತ, ಆಹಾರ ಪದ್ಧತಿ, ಆಂಧ್ರಶೈಲಿ, ಕೇರಳ ಶೈಲಿ, ತಮಿಳುನಾಡು ಶೈಲಿ, ಮರಾಠಿ ಶೈಲಿಯಲ್ಲಿನ ಸಸ್ಯಹಾರಿ ಮತ್ತು ಮಾಂಸಹಾರಿ ಆಹಾರ ಪದ್ಧತಿ ಶೈಲಿಯ ಜೊತೆಗೆ ಅಂತರ್ ರಾಷ್ಟ್ರೀಯ ಚೈನೀಸ್, ಟಿಬೆಟಿಯನ್, ಇಟಾಲಿಯನ್, ಫ್ರೆಂಚ್ ಹಾಗೂ ಆಫ್ರಿಕನ್ ಆಹಾರ ಪದ್ಧತಿಯಡಿಯಲ್ಲಿ ಆಹಾರ ತಯಾರಿಸುವ ಅಡುಗೆಗಳು ಮತ್ತು ಸಿರಿಧಾನ್ಯ ಮತ್ತು ಸಹಜ ಹಾಗೂ ಸಾವಯವ ಧಾನ್ಯಗಳು ಮತ್ತು ತರಕಾರಿಗಳಲ್ಲಿ ಅಡುಗೆಗಳನ್ನು ಮಾಡುವ ವ್ಯಕ್ತಿಗಳು, ಗೃಹಿಣಿಯರು, ಹೊಟೇಲ್‌ಗಳು, ಸಂಘ ಸಂಸ್ಥೆಗಳು, ರೆಸ್ಟೋರೆಂಟ್‌ಗಳು ಮತ್ತು ಇತರರು ಭಾಗವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- ಅರ್ಜಿಗಳನ್ನು ದಿನಾಂಕ: 01-09-2026 ರಿಂದ 16-09-2026 ರವರೆಗೆ, ಹೆಚ್ಚುವರಿ ಆಯುಕ್ತರವರ ಕಚೇರಿ, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇಲ್ಲಿ ನೀಡಲಾಗುವುದು. ದಿನಾಂಕ: 19-09-2026 ರಂದು ಸಂಜೆ. 5.30 ರೊಳಗೆ ಪಡೆದ ಅರ್ಜಿಗಳನ್ನು ಹೆಚ್ಚುವರಿ ಆಯುಕ್ತರವರ ಕಚೇರಿಗೆ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ, ಶ್ರೀಮತಿ. ವೀಣಾ ಬಿ. ಎನ್, ಉಪ ವಿಶೇಷಾಧಿಕಾರಿಗಳು, ಆಹಾರ ಮೇಳ ಉಪಸಮಿತಿ ಹಾಗೂ ಶ್ರೀ. ಜಿ. ಶ್ರೀನಿವಾಸಮೂರ್ತಿ, ಕಾರ್ಯಾಧ್ಯಕ್ಷರು, ಕಾರ್ಯಪಾಲಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು, ಶ್ರೀ. ರವಿಕುಮಾರ್ ಕೆ. ಎಂ, ಕಾರ್ಯದರ್ಶಿಗಳು, ಕಾರ್ಯಾಪಾಲಕ ಅಭಿಯಂತರರು, ಜಿಲ್ಲಾನಗರಾಭಿವೃದ್ಧಿ ಕೋಶ, ಮೈಸೂರು ರವರನ್ನುಗಳನ್ನು ಸಂಪರ್ಕಿಸಬಹುದಾಗಿದೆ.
- ಸಾಫ್ಟ್ ಡ್ರಿಂಕ್ಸ್, ಐಸ್‌ಕ್ರೀಂ ಮತ್ತು ಮಿನರಲ್ ವಾಟರ್ ಪದಾರ್ಥಗಳಿಗೆ ಪ್ರಾಯೋಜಕತ್ವ ಇರುವುದರಿಂದ ಸದರಿ ಪದಾರ್ಥಗಳಿಗೆ ಅರ್ಜಿಗಳ ವಿತರಣೆ ಇರುವುದಿಲ್ಲ.
- ಸಲ್ಲಿಸಲಾದ ಅರ್ಜಿಗಳನ್ನು ಖಾದ್ಯಗಳ ಅನುಗುಣವಾಗಿ ವಿಂಗಡಿಸಿ ಅವುಗಳನ್ನು ದಿನಾಂಕ: 22-09-2026 ರಂದು ಬೆಳಗ್ಗೆ 11.00 ಗಂಟೆಗೆ ಟೌನ್‌ಹಾಲ್‌ನಲ್ಲಿ ಲಾಟರಿ ಮುಖಾಂತರ ಆಯ್ಕೆ ಮಾಡಲಾಗುವುದು. ಈ ಮಾಹಿತಿಯನ್ನು ಪ್ರಕಟಣ ಫಲಕದ ಮುಖಾಂತರ ಅರ್ಜಿದಾರರಿಗೆ ತಿಳಿಸಲಾಗುವುದು.
- ಆಯ್ಕೆಯಾದ ಅರ್ಜಿದಾರರು ಈ ಉಪ ಸಮಿತಿಯಲ್ಲಿ ನಿಗಧಿಪಡಿಸಿರುವ ದರದಂತೆ, ತಿಳಿಸಿರುವ ದಿನಾಂಕದೊಳಗೆ ಡಿ.ಡಿಯನ್ನು ಸಲ್ಲಿಸತಕ್ಕದ್ದು, ಮತ್ತು ಡಿ.ಡಿ ನೀಡಲು ತಪ್ಪಿದ್ದಲ್ಲಿ ಇತರೆ ಅರ್ಜಿದಾರರಿಗೆ ಲಾಟರಿ ಮುಖಾಂತರ ಅವಕಾಶ ಕಲ್ಪಿಸಲಾಗುವುದು